ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

# ಪತ್ರಿಕಾ ತುಣುಕುಗಳು
# PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 30/05/2019

## ವೇತನ ಪರಾಮರ್ಶೆಗೆ ಅಧಿಕಾರಿಗಳ ಸಮಿತಿ

**ವಿಕ ಸುದ್ದಿಲೋಕ** ಬೆಂಗಳೂರು

6ನೇ ರಾಜ್ಯ ವೇತನ ಆಯೋಗದ 2ನೇ ಸಂಪುಟದ ವರದಿ ಶಿಫಾರಸುಗಳ ಸಮಗ್ರ ಪರಿಶೀಲನೆಗಾಗಿ 'ಅಧಿಕಾರಿಗಳ ಸಮಿತಿ' ರಚಿಸಿ ರಾಜ್ಯ ಸರಕಾರ ಬುಧವಾರ ಆದೇಶ ಹೊರಡಿಸಿದೆ.

ಎರಡನೇ ಸಂಪುಟದ ಒಟ್ಟಾರೆ ಶಿಫಾರಸುಗಳ ಪೈಕಿ ಈಗಾಗಲೇ ಅನುಷ್ಠಾನಗೊಂಡಿರುವ ವಿಚಾರಗಳನ್ನು ಹೊರತುಪಡಿಸಿ ನಿರ್ದಿಷ್ಟ ವೃಂದಗಳ ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಭತ್ಯೆಗಳ ಮಂಜೂರಾತಿ, ನಾನಾ ಇಲಾಖೆಗಳು ಮತ್ತು ನೌಕರರ ಕಾರ್ಯಕ್ಷಮತೆ ಉತ್ತಮಪಡಿಸುವುದು ಹಾಗೂ ಹಲವು ಆಡಳಿತಾತ್ಮಕ ಸುಧಾರಣೆಗಳ ಕುರಿತ ಶಿಫಾರಸುಗಳನ್ನು ಸಮಗ್ರವಾಗಿ ಪರಿಶೀಲಿಸಿ ಶೀಘ್ರ ವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ.

'ಅಧಿಕಾರಿಗಳ ಸಮಿತಿ'ಗೆ ರಾಜ್ಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷರಾಗಿದ್ದಾರೆ.